

بِسۡمِ اللّٰہِ الرَّحۡمٰنِ الرَّحِیۡمِ

# ವಕ್‌ಫೇ ಜದೀದ್ – 2019

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 04–01–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು 2019ರ ಪ್ರಥಮ ಜುಮುಅ ಆಗಿದೆ. ಲೋಕದಾದ್ಯಂತ ಇರುವ ಎಲ್ಲಾ ಅಹ್ಮದಿಯರಿಗೆ ಮೊದಲನೆಯದಾಗಿ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ. ಅಲ್ಲಾಹನು ಈ ವರ್ಷ ನಮಗೆ ಅನುಗ್ರಹದಾಯಕವನ್ನಾಗಿ ಮಾಡಲಿ ಮತ್ತು ಅಸಂಖ್ಯಾತ ಜಯಗಳನ್ನು ತರುವಂತಹದಾಗಲಿ. ಆದರೆ ನಾವು ನೆನಪಿಡಬೇಕಾದುದೇನೆಂದರೆ ಕೇವಲ ಆಚಾರ ರೂಪದಲ್ಲಿ ಶುಭಾಶಯಗಳನ್ನು ಕೋರುವುದರಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಆಚಾರ ರೂಪದ ಶುಭಾಶಯಗಳು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವಂತೆ ಮಾಡಲಾರದು. ವರ್ಷದ ವಾಸ್ತವಿಕ ಶುಭಾಶಯವೇನೆಂದರೆ ಅಲ್ಲಾಹನು ನಮಗೆ ಇನ್ನೊಂದು ವರ್ಷದ ಸೂರ್ಯನನ್ನು ತೋರಿಸಿರುವುದರಿಂದ ಮತ್ತು ಹೊಸ ವರ್ಷದಲ್ಲಿ ನಮ್ಮನ್ನು ಪ್ರವೇಶಗೊಳಿಸಿರುವುದರಿಂದ ನಾವು ಈ ವರ್ಷದಲ್ಲಿ ನಮ್ಮೊಳಗಿರುವ ಬಲಹೀನತೆಗಳನ್ನೂ ಅಂಧಕಾರಗಳನ್ನೂ ದೂರಸರಿಸಲು ಪ್ರಯತ್ನ ಮಾಡುವೆವು ಎಂದು ಪ್ರತಿಜ್ಞೆ ಮಾಡಬೇಕು. ಕಳೆದ ವರ್ಷದಲ್ಲಿ ನಮ್ಮಿಂದ ಸಂಭವಿಸಿದ ಕುಂದುಕೊರತೆಗಳನ್ನು ನಾವು ಈ ವರ್ಷ ದೂರ ಸರಿಸುವೆವು ಎಂದು ಪ್ರತಿಜ್ಞೆ ಮಾಡಬೇಕು. ನಾವು ನಮ್ಮಲ್ಲಿ ಹಿಂದೆ ಮಾಡಿದುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಪರಿಶುದ್ಧ ಬದಲಾವಣೆಗಳನ್ನು ಉಂಟುಮಾಡಲು ಪ್ರಯತ್ನ ಮಾಡುವೆವು ಎಂದು ಬೈಅತ್ ಮಾಡುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡುವ ಪ್ರತಿಜ್ಞೆಯನ್ನು ಈಡೇರಿಸುವವರಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಸಂದರ್ಭದಲ್ಲಿ ಒಬ್ಬ ಅಹ್ಮದಿ ಹೇಗಿರಬೇಕು ಎಂದು ವಿವರಿಸುತ್ತಾ ಹೀಗೆ ಹೇಳಿದರು: ನೀವು ಈ ಜಮಾಅತಿನಲ್ಲಿ ಪ್ರವೇಶಿಸಿರುವುದರಿಂದ ನೀವು ಒಳ್ಳೆಯವರಾಗಲು ಮತ್ತು ಮುತ್ತಖಿ ಆಗಲು ಪ್ರಯತ್ನಿಸಬೇಕು. ನೀವು ಪ್ರತಿಯೊಂದು ಕೆಡುಕಿನಿಂದ ನಿಮ್ಮನ್ನು ರಕ್ಷಿಸಿಕೊಳ್ಳಬೇಕು. ನೀವು ಹಗಲು ರಾತ್ರಿ ಅಳುತ್ತಾ ಪ್ರಾರ್ಥಿಸಿರಿ. ಮಾತುಗಳನ್ನು ಮೃದುವಾಗಿರಿಸಿರಿ. ಇಸ್ತಿಗ್‌ಫಾರ್ ಮಾಡುವ ಅಭ್ಯಾಸ ಹೊಂದಿರಿ. ನಮಾಝ್‌ಗಳಲ್ಲಿ ಪ್ರಾರ್ಥನೆಗಳನ್ನು ಮಾಡಿರಿ. ನೀವು ನಮಾಝ್‌ಗಳ ಹಕ್ಕುಗಳನ್ನು ಈಡೇರಿಸಿಕೊಡುವಾಗ ಮಾತ್ರ ನೀವು ನಮಾಝ್‌ಗಳಲ್ಲಿ ಪ್ರಾರ್ಥಿಸುವವರಾಗುವಿರಿ. ನೀವು ನಮಾಝ್‌ಗಳನ್ನು ಸಾವಧಾನದಿಂದ ಅನುಷ್ಠಿಸುವವರಾಗಬೇಕು. ಅಲ್ಲಾಹನು ಕೇವಲ ಮಾತುಗಳಿಂದ ಸಂಪ್ರೀತನಾಗುವುದಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಈಮಾನ್‌ನೊಂದಿಗೆ ಅಮಲೆಸಾಲಿಹ್ (ಸತ್ಕರ್ಮ)ಗಳನ್ನು ಸಹ ಸೇರಿಸಿ ಹೇಳಿರುತ್ತಾನೆ. ಅಮಲೆ ಸಾಲಿಹಾತ್ ಎಂದರೆ ಸ್ವಲ್ಪವೂ ದೋಷವಿಲ್ಲದ ಸತ್ಕರ್ಮ. ಇದು ನಾವು ಅನುಸರಿಸಬೇಕಾದ ಮಟ್ಟ ಮತ್ತು ನಾವು ಮಾಡಬೇಕಾದ ಕೆಲಸದ ಮಾರ್ಗಸೂಚಿಯಾಗಿದೆ. ನಾವು ಈ ಪ್ರಕಾರ ನಮ್ಮ ಕೆಲಸಗಳನ್ನು ಮಾಡುವವರಾದರೆ, ನಾವು ಅವುಗಳನ್ನು ಗಳಿಸಲು ನಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಲು ಪ್ರಯತ್ನ ಮಾಡುವವರಾದರೆ, ಖಂಡಿತವಾಗಿ ಈ ವರ್ಷ ನಮಗೆ ಬಹಳ ಅನುಗ್ರಹಕರವಾಗುವುದು ಮತ್ತು ಅದು ಅನೇಕ ಅನುಗ್ರಹಗಳನ್ನು ತರುವುದು. ಹೀಗೆ ಅಲ್ಲವಾದರೆ ನಾವು ಕೋರುವ ಹೊಸ ವರ್ಷದ ಶುಭಾಶಯಗಳು ನಾನು ಹೇಳಿದಂತೆ ಕೇವಲ ಆಚಾರ ರೂಪದ ಶುಭಾಶಯಗಳಾಗಿರುವುದು. ಹೊಸ ವರ್ಷದ ಆರಂಭದ ಪ್ರಥಮ ರಾತ್ರಿ ತಹಜ್ಜುದ್ ನಮಾಝ್ ಮಾಡಿ ಬಾಜಮಾಅತ್ ಫಜರ್ ನಮಾಝ್ ನಿರ್ವಹಿಸಿದರೆ ಅದು ವರ್ಷವಿಡೀ ಒಳಿತುಗಳಾಗಿ ಆವರಿಸಲಾರದು. ಆದರೆ ಇಂತಹ ಪ್ರಯತ್ನವನ್ನು ಸಾಧ್ಯವಿರುವಷ್ಟು ಇಡೀ ವರ್ಷ ಜಾರಿಯಲ್ಲಿರಿಸುವುದು ವಾಸ್ತವಿಕ ಒಳಿತಾಗಿದೆ. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ. ನಮ್ಮ ವೈಯಕ್ತಿಕ ಜೀವನದಲ್ಲಿಯೂ ಈ ವರ್ಷ ಅಸಂಖ್ಯಾತ ಅನುಗ್ರಹಗಳನ್ನು ತರುವಂತಹದಾಗಲಿ. ಹಾಗೂ ಜಮಾಅತ್ ಅಸಾಧಾರಣವಾಗಿ ಅಭಿವೃದ್ಧಿ ಹೊಂದುವುದನ್ನು ನಾವು ಕಾಣುವವರಾಗಲಿ.

ಇನ್ನು ನಾನು ಇನ್ನೊಂದು ವಿಷಯದ ಕಡೆಗೆ ಬರುತ್ತೇನೆ. ಜನವರಿಯ ಮೊದಲನೆಯ ಅಥವಾ ಎರಡನೆಯ ಖುತ್‌ಬದಲ್ಲಿ ಸಾಮಾನ್ಯವಾಗಿ ವಕ್‌ಫೇ ಜದೀದಿನ ಹೊಸ ವರ್ಷಾರಂಭವನ್ನು ಪ್ರಕಟಿಸಲಾಗುತ್ತದೆ. ಅಲ್ಲಾಹನ ಅನುಗ್ರಹದಿಂದ ಸಾಂಪತ್ತಿಕ ಬಲಿದಾನಗಳನ್ನು ಅರ್ಪಿಸುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನ ಒಂದು ವೈಶಿಷ್ಟ್ಯವಾಗಿದೆ. ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗಳ ಮತ್ತು ಉಪದೇಶಗಳ ಪ್ರಕಾರ ಸಾಂಪತ್ತಿಕ ತ್ಯಾಗದ ಬಗ್ಗೆ ವಿಶೇಷವಾದ ಜ್ಞಾನವನ್ನು ನಮಗೆ ನೀಡಿರುವುದರಿಂದ ಇದು ಸಂಭವಿಸುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ಸ್ಥಳಗಳಲ್ಲಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಬಗ್ಗೆ ಸತ್ಯವಿಶ್ವಾಸಿಗಳ ಗಮನ ಹರಿಸಿದ್ದಾನೆ. ಆದರೆ ಹೀಗೆ ಮಾಡಿರುವುದು ಅಲ್ಲಾಹನಿಗೆ ನಮ್ಮ ಸಂಪತ್ತಿನ ಆವಶ್ಯಕತೆ ಇರುವ ಕಾರಣದಿಂದಲ್ಲ. ಅದರಿಂದ ನಮಗೆಯೇ ಪ್ರಯೋಜನ ಲಭಿಸುತ್ತದೆ ಎಂಬ ಕಾರಣದಿಂದಾಗಿದೆ. ಅದರಿಂದ ಜಮಾಅತಿಗೆ ಸಹ ಲಾಭ ಸಿಗುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: إِن تُقْرِضُوا اللَّهَ قَرْضًا حَسَنًا يُضَاعِفْهُ لَكُمْ وَيَغْفِرْ لَكُمْ ۚ وَاللَّهُ شَكُورٌ حَلِيمٌ – **ಇನ್ ತುಖ್‌ರಿಝುಲ್ಲಾಹ ಖರ್‌ಝನ್ ಹಸನನ್ ಯುಝಾಯಿಫ್‌ಹು ಲಕುಮ್ ವ ಯಗ್‌ಫಿರು ಲಕುಮ್, ವಲ್ಲಾಹು ಶಕೂರುನ್ ಹಲೀಮ್.** ನೀವು ಅಲ್ಲಾಹನಿಗೆ ಉತ್ತಮವಾದ ರೀತಿಯಲ್ಲಿ ಸಾಲ ನೀಡಿದರೆ, ಅವನು ಅದನ್ನು ನಿಮಗೆ ವೃದ್ಧಿಗೊಳಿಸಿ ಹಿಂತಿರುಗಿಸುವನು.

ನಿಮ್ಮನ್ನು ಕ್ಷಮಿಸುವನು. ಅಲ್ಲಾಹನು (ತನ್ನ ದಾಸರ ಸತ್ಕರ್ಮಗಳನ್ನು) ಅತಿ ಹೆಚ್ಚು ಮೆಚ್ಚುವವನೂ ಸೈರಿಸುವವನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 64:18).

ಯಾರು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೋ ಅವನಿಗೆ ಅಲ್ಲಾಹನು ವೃದ್ಧಿಗೊಳಿಸಿ ಮರಳಿಸುತ್ತಾನೆ. ಈ ಸಾಂಪತ್ತಿಕ ತ್ಯಾಗದಿಂದ ವೈಯಕ್ತಿಕ ಲಾಭವೂ ಸಿಗುವುದು ಮತ್ತು ಜಮಾಅತಿಗೆ ಸಹ ಅಭಿವೃದ್ಧಿ ಸಿಗುವುದು. ಆ ಮೂಲಕ ಪುನಃ ವ್ಯಕ್ತಿಗಳ ಅಭಿವೃದ್ಧಿಗೆ ಮಾರ್ಗವಾಗುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ನೀವು ಜಿಪುಣತನದಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಹಿಂದಿನ ಕಾಲದ ಜನಾಂಗಗಳನ್ನು ಜಿಪುಣತನವೇ ನಾಶಮಾಡಿದೆ. ಇನ್ನೊಂದು ಸಂದರ್ಭದಲ್ಲಿ ಅವರು ಹೇಳಿದರು: ನೀವು ಅರ್ಧ ಖರ್ಜೂರವನ್ನು ಖರ್ಚು ಮಾಡಿಯಾದರೂ ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ. ಇದರ ಅರ್ಥವೇನೆಂದರೆ, ಅಲ್ಲಾಹನ ಮಾರ್ಗದಲ್ಲಿ ಸಾಮಾನ್ಯ ಪ್ರಮಾಣದಲ್ಲಿ ಖರ್ಚು ಮಾಡಿದರೂ, ಅಲ್ಲಾಹನ ಸಂಪ್ರೀತಿಗಳಿಸಲಿಕ್ಕೋಸ್ಕರ ಸ್ವಲ್ಪ ಖರ್ಚು ಮಾಡಿದರೂ ಅದು ನರಕಾಗ್ನಿಯಿಂದ ರಕ್ಷಿಸುವುದು. ಆದುದರಿಂದ ಸಾಂಪತ್ತಿಕ ತ್ಯಾಗ ಮಾಡುವುದು ಸಹ ನಮ್ಮದೇ ಲಾಭಕ್ಕೋಸ್ಕರವಾಗಿದೆ. ಸಾಂಪತ್ತಿಕ ಬಲಿದಾನದ ಮಹತ್ವದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಸಂಪತ್ತನ್ನೂ ಪ್ರೀತಿಸುವುದು ಅಲ್ಲಾಹನನ್ನೂ ಪ್ರೀತಿಸುವುದು ಸಾಧ್ಯವಿಲ್ಲ. ನೀವು ಒಂದನ್ನು ಮಾತ್ರ ಪ್ರೀತಿಸಬಲ್ಲಿರಿ. ಆದುದರಿಂದ ಅಲ್ಲಾಹನನ್ನು ಪ್ರೀತಿಸುವವನು ಭಾಗ್ಯಶಾಲಿಯಾಗಿದ್ದಾನೆ. ನಿಮ್ಮ ಪೈಕಿ ಯಾರಾದರೂ ಅಲ್ಲಾಹನನ್ನು ಪ್ರೀತಿಸಿ ಅವನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡುವುದಾದರೆ ಅವನ ಸಂಪತ್ತಿನಲ್ಲಿ ಸಹ ಅನ್ಯರಿಗಿಂತ ಹೆಚ್ಚು ಅನುಗ್ರಹ ನೀಡಲ್ಪಡುವುದು. ಏಕೆಂದರೆ ಸಂಪತ್ತು ತಾನಾಗಿ ಬರುವುದಿಲ್ಲ. ಅದು ಅಲ್ಲಾಹನ ಇರಾದೆ ಪ್ರಕಾರ ಬರುತ್ತದೆ. ಆದುದರಿಂದ ಅಲ್ಲಾಹನಿಗೋಸ್ಕರ ಒಬ್ಬನು ತನ್ನ ಸಂಪತ್ತಿನ ಕೆಲವು ಭಾಗ ತ್ಯಾಗ ಮಾಡುವುದಾದರೆ ಅವನು ಖಂಡಿತವಾಗಿಯೂ ಅದನ್ನು ಮರಳಿ ಪಡೆಯುವನು. ಆದರೆ ಯಾರು ಸಂಪತ್ತನ್ನು ಪ್ರೀತಿಸಿ ಅಲ್ಲಾಹನ ಮಾರ್ಗದಲ್ಲಿ ಸೇವೆ ಮಾಡಬೇಕಾದ ರೀತಿಯಲ್ಲಿ ಸೇವೆ ಮಾಡುವುದಿಲ್ಲವೋ ಅವನು ಖಂಡಿತವಾಗಿಯೂ ತನ್ನ ಸಂಪತ್ತನ್ನು ಕಳೆದುಕೊಳ್ಳುವನು. ಸಂಪತ್ತು ನಿಮ್ಮ ಪ್ರಯತ್ನದಿಂದ ಲಭಿಸುತ್ತದೆ ಎಂದು ನೀವು ಯೋಚಿಸಬೇಡಿರಿ. ಅದು ಅಲ್ಲಾಹನಿಂದ ಬರುತ್ತದೆ. ಆದುದರಿಂದ ನೀವು ನಿಮ್ಮ ಸಂಪತ್ತಿನ ಒಂದು ಭಾಗವನ್ನು ಕೊಟ್ಟು ಅಥವಾ ಬೇರೆ ರೀತಿಯಲ್ಲಿ ಯಾವುದಾದರೂ ಸೇವೆ ಮಾಡಿ ಅಲ್ಲಾಹನಿಗೆ ಮತ್ತು ಅವನು ನಿಯೋಜಿಸಿದವರಿಗೆ ಏನಾದರೂ ಔದಾರ್ಯ ತೋರಿಸುತ್ತಿದ್ದೀರಿ ಎಂದು ನೀವು ಯೋಚಿಸಬೇಡಿರಿ. ಅಲ್ಲಾಹನು ನಿಮ್ಮನ್ನು ಈ ಸೇವೆಗೆ ಕರೆಯುತ್ತಿರುವುದು ಅವನ ಔದಾರ್ಯವಾಗಿದೆ. ನೀವು ದೃಢವಾಗಿ ನಂಬಿರಿ ಇದು ಆಕಾಶದಿಂದ ನಡೆಸಲ್ಪಡುವ ಕೆಲಸವಾಗಿದೆ. ನಿಮ್ಮ ಸೇವೆ ನಿಮ್ಮ ಒಳಿತಿಗಾಗಿಯೇ ಆಗಿದೆ.

ಅಲ್ಲಾಹನ ಅನುಗ್ರಹದಿಂದ ಬಲಿದಾನಗಳ ಮತ್ತು ಸೇವೆಯ ಈ ಆತ್ಮವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದವರು ಮನವರಿಕೆ ಮಾಡಿದರು. ಚೆನ್ನಾಗಿ ಮನವರಿಕೆ ಮಾಡಿ ಸಾಂಪತ್ತಿಕ ಬಲಿದಾನಗಳನ್ನು ಧಾರಾಳವಾಗಿ ನೀಡಲು ಗಮನ ಹರಿಸುತ್ತಿದ್ದಾರೆ. ಬಹಳ ಹಿಂದೆ ಬೈಅತ್ ಮಾಡಿದವರು ಮಾತ್ರವಲ್ಲ ಹೊಸದಾಗಿ ಬೈಅತ್ ಮಾಡಿದವರು ಸಹ ಬೈಅತ್ ಮಾಡಿದ ನಂತರ ಸಾಂಪತ್ತಿಕ ಬಲಿದಾನದ ತಿರುಳನ್ನೂ ವಾಸ್ತವಿಕತೆಯನ್ನೂ ಮನವರಿಕೆ ಮಾಡಿಕೊಳ್ಳುತ್ತಾರೆ. ಕೆಲವರು ಅತ್ಯಂತ ದರಿದ್ರಾವಸ್ಥೆಯಲ್ಲಿ ಜೀವಿಸುತ್ತಿದ್ದರೂ ಆರ್ಥಿಕ ಬಲಿದಾನ ನೀಡುವುದರಲ್ಲಿ ಯಾರಿಗೂ ಹಿಂದಾಗಲು ಇಚ್ಛಿಸುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಅವರ ಸಹಾಬರು ಬಲಿದಾನ ನೀಡುತ್ತಿದ್ದ ಹಾಗೆ ಅವರು ಬಲಿದಾನ ನೀಡುತ್ತಿದ್ದಾರೆ. ಕೆಲವು ಉದಾಹರಣೆಗಳು ಹೇಗಿವೆ ಎಂದರೆ ಅವುಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆಗ ಹೇಳಿದ್ದರು: ನಾನು ನನ್ನ ಜಮಾಅತಿನ ಪ್ರೀತಿ ಮತ್ತು ನಿಷ್ಠೆ ಬಗ್ಗೆ ಆಶ್ಚರ್ಯ ಪಡುತ್ತೇನೆ. ಅವರಲ್ಲಿ ಕೆಲವರು ಅತ್ಯಂತ ಕಡಿಮೆ ಸಂಪಾದನೆ ಮಾಡುವವರಾಗಿದ್ದಾರೆ. ಒಂದು ಉದಾಹರಣೆ ನೀಡುತ್ತಾ ಹೇಳಿದರು: ಮಿಯಾಂ ಜಮಾಲುದ್ದೀನ್, ಖೈರುದ್ದೀನ್ ಮತ್ತು ಇಮಾಮುದ್ದೀನ್ ಕಾಶ್ಮೀರಿ ನನ್ನ ಗ್ರಾಮದ ಸಮೀಪ ವಾಸವಾಗಿದ್ದಾರೆ. ಈ ಮೂವರು ಪ್ರಾಯಶಃ ದಿನಂಪ್ರತಿ ಕಾರ್ಮಿಕರಾಗಿ ಮೂರು ನಾಲ್ಕು ಆಣೆಗಳನ್ನು ಸಂಪಾದಿಸುತ್ತಾರೆ. ಅವರೆಲ್ಲರೂ ಉತ್ಸಾಹದಿಂದ ಮಾಸಿಕ ಚಂದ ನೀಡುವವರಾಗಿದ್ದಾರೆ.

(ಲೋಕದಾದ್ಯಂತ ಜಮಾಅತ್‌ಗಳು ನೀಡಿದ ಸಾಂಪತ್ತಿಕ ಬಲಿದಾನಗಳ ಬಗ್ಗೆ ಈಮಾನ್ ವರ್ಧಕ ಕೆಲವು ಘಟನೆಗಳನ್ನು ವಿವರಿಸುತ್ತಾ ಹುಝೂರ್ ಹೇಳಿದರು:) ಘಾನದ ರಂಪೋಂಗ್ ಸಾಹಿಬ್ ಹೇಳುತ್ತಾರೆ: ಕೆಲವು ವರ್ಷಗಳ ಹಿಂದೆ ನನ್ನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಐದು ಸಾವಿರ ಪೌಂಡ್ ಫೀಸ್ ಕಟ್ಟಲಿಕ್ಕಿತ್ತು. ಆಗ ನಾನು ನೌಕರಿ ಸಹ ಮಾಡುತ್ತಿದ್ದೆ. ಆದರೆ ನನ್ನ ಒಂದು ವರ್ಷದ ಸಂಬಳ ಸಹ ಅಷ್ಟು ಆಗುತ್ತಿರಲಿಲ್ಲ. ನನಗೆ ಬ್ಯಾಂಕ್‌ನಿಂದ ಮೂರು ಸಾವಿರ ಪೌಂಡ್ ಸಾಲ ದೊರಕಿತು. ನನ್ನ ಸಂಬಳದ ಶೇಕಡ 40ರಷ್ಟು ಹಣ ಪ್ರತಿ ತಿಂಗಳು ಸಾಲ ಮರುಪಾವತಿಗೆ ವಿನಿಯೋಗಿಸಲ್ಪಡುತ್ತಿತ್ತು. ಆದರೆ ನಾನು ಚಂದವನ್ನು ನನ್ನ ಸಂಬಳದ ಪೂರ್ಣ ಸಂಖ್ಯೆಗೆ ನೀಡುತ್ತಿದ್ದೆ. ನನ್ನ ಸಂಬಳದ ಶೇಕಡ 40ರಷ್ಟು ಹಣ ಸಾಲ ಮರುಪಾವತಿಗೆ ಹೋಗುತ್ತಿದೆ ಎಂದು ಪರಿಗಣಿಸುತ್ತಿರಲಿಲ್ಲ. ನಾನು ಒಂದು ದಿವಸ ಕುಮಾಸಿಯಲ್ಲಿರುವ ಮಿಶನ್ ಹೌಸಿಗೆ ಹೋದಾಗ ಸರ್ಕಿಟ್‌ನ ಮಿಶನರಿ ನನ್ನ ವಕ್ಫೇ ಜದೀದ್ ಚಂದದ ವಾಗ್ದಾನ ಬಗ್ಗೆ ನೆನಪಿಸಿದರು. ಆಗ ನನ್ನ ಜೇಬಿಗೆ ಕೈ ಹಾಕಿದಾಗ ಅಲ್ಲಿ ನಾನು ವಾಗ್ದಾನ ಮಾಡಿದಷ್ಟು ಹಣವಿತ್ತು. ಆದರೆ ನಾನು ಯೋಚಿಸಿದೆ ಈ ಹಣವನ್ನು ಚಂದವಾಗಿ ಕೊಟ್ಟರೆ ನನ್ನ ಕೆಲಸದ ಸ್ಥಳಕ್ಕೆ ಹೋಗಲು ಹಣ ಸಾಕಾಗಲಾರದು ಎಂದು. ಆದರೆ ನಾನು ಚಂದದ ಹಣವನ್ನು ಆಗಲೆ ಪಾವತಿ ಮಾಡಿದೆ. ನಾನು ಮಿಶನ್ ಹೌಸ್‌ನಿಂದ ಮನೆಗೆ ಹೋಗುವಾಗ ನನ್ನ ಫೋನ್‌ನಲ್ಲಿ ಒಂದು ಮೇಸೇಜು ಬಂತು. ನನ್ನ ಬ್ಯಾಂಕ್ ಅಕೌಂಟ್‌ನಲ್ಲಿ ಹಣ ಜಮೆ ಆಗಿದೆ ಎಂದು. ಆ ಹಣ ನಾನು ಚಂದವಾಗಿ ನೀಡಿದ ಹಣಕ್ಕಿಂತ ಐದು ಪಟ್ಟು ಹೆಚ್ಚಿಗೆ ಇತ್ತು. ನಾನು ಯೋಚಿಸಿದೆ ಪ್ರಾಯಶಃ ಬ್ಯಾಂಕ್ ತಪ್ಪಾಗಿ ನನ್ನ ಖಾತೆಗೆ ಹಣ ಜಮಾಯಿಸಿದೆ, ನಂತರ ಅದು ಅದನ್ನು ಮರಳಿ ತೆಗೆದುಕೊಳ್ಳುವುದು ಎಂದು. ಏಕೆಂದರೆ ನನ್ನ ಸಂಬಳ ನನ್ನ

ಖಾತೆಗೆ ಮೊದಲೇ ಜಮೆ ಆಗಿತ್ತು. ಆದರೆ ಮರುದಿನ ನಾನು ಕೆಲಸಕ್ಕೆ ಹೋದಾಗ ನನಗೆ ತಿಳಿಯಿತು ಅದು ಸರಕಾರದಿಂದ ನನ್ನ ಖಾತೆಗೆ ಜಮಾಯಿಸಿದ ಹಣವೆಂದು. ಅದು ನನಗೆ ಸಿಗಬೇಕಾಗಿ ಬಾಕಿಯಾಗಿ ಉಳಿದ ಹಣವೆಂದು ತಿಳಿಯಿತು. ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದೆ. ನನಗೆ ಭಯವಿದ್ದರೂ ಚಂದ ನೀಡುವ ಧೈರ್ಯ ಅಲ್ಲಾಹನು ನನಗೆ ನೀಡಿದ್ದನು. ಅದರ ನಂತರ ನಾನು ಚಂದದ ನನ್ನ ವಾಗ್ದಾನಗಳ ಬಗ್ಗೆ ಮತ್ತು ಪಾವತಿ ಬಗ್ಗೆ ಬಹಳ ಶ್ರದ್ಧೆವಹಿಸಲು ತೊಡಗಿದೆ.

ಭಾರತದ ಇನ್ಸ್‌ಪೆಕ್ಟರ್ ವಕ್‌ಫೇ ಜದೀದ್ ಇಖ್‌ಬಾಲ್ ಸಾಹಿಬ್ ಬರೆಯುತ್ತಾರೆ: ಕಾಮಾರೆಡ್ಡಿ ಜಮಾಅತ್‌ನಲ್ಲಿ ವಕ್‌ಫೇ ಜದೀದ್ ಚಂದ ನೀಡುವ ಬಗ್ಗೆ ಉಪದೇಶಿಸಿದಾಗ ಒಬ್ಬ ಯುವಕ ಕೂಡಲೇ ಪೂರ್ಣ ಚಂದ ಪಾವತಿಸಿದರು. ಅದೇ ದಿನ ಅವರಿಗೆ ಒಂದು ದೊಡ್ಡ ಸಂಖ್ಯೆಯ ಹಣ ದೊರಕುವ ಬಗ್ಗೆ ಸಮಾಚಾರ ಲಭಿಸಿತು. ಆ ಹಣಕ್ಕೋಸ್ಕರ ಎಂಟು ವರ್ಷದಿಂದ ಅವರು ಕಾಯುತ್ತಿದ್ದು ಆ ಹಣ ದೊರಕುವ ಭರವಸೆಯೇ ಇರಲಿಲ್ಲ. ಅವರಿಗೆ ಹಣ ದೊರಕಿತಲ್ಲದೆ ಅವರ ತಾತ್ಕಾಲಿಕ ಕೆಲಸ ಸ್ಥಿರವಾಯಿತು. ಅವರು ಬಹಳ ಸಂತೋಷಗೊಂಡು ಹೇಳಿದರು: ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ ಕಾರಣ ಸಂಭವಿಸಿದ ಪವಾಡ ಇದಾಗಿದೆ. ಅವರು ಹೇಳುತ್ತಾರೆ: ನಾನು ಪ್ರತಿವರ್ಷ ಹದಿನೈದು ದಿವಸಗಳ ಸಂಪಾದನೆ ವಕ್‌ಫೇ ಜದೀದ್ ಚಂದವಾಗಿ ನೀಡುವೆನು.

ರುಮೇನಿಯಾ ದೇಶದ ಮುಬಲ್ಲಿಗ್ ಫಹೀಮ್ ಸಾಹಿಬ್ ಬರೆಯುತ್ತಾರೆ: ಒಬ್ಬ ಅಹ್ಮದಿ ಟೈಲರಿಂಗ್ ಕೆಲಸ ಮಾಡುತ್ತಿದ್ದಾರೆ. ಅವರು ಕ್ರಮಬದ್ಧವಾಗಿ ಬಹಳ ಸಂತೋಷದಿಂದ ಚಂದ ಕೊಡುತ್ತಿದ್ದಾರೆ. ಅವರು ಎಷ್ಟು ನಿಷ್ಠಬದ್ಧರಾಗಿದ್ದಾರೆ ಎಂದರೆ ಅವರಿಗೆ ಚಂದದ ಬಗ್ಗೆ ನೆನಪಿಸುವ ಆವಶ್ಯಕತೆ ಇರುವುದಿಲ್ಲ. ಅವರು ಹೇಳುತ್ತಾರೆ: ಅಲ್ಲಾಹನ ಅನುಗ್ರಹದಿಂದ ನಾನು ಚಂದ ನೀಡಲು ಪ್ರಾರಂಭಿಸಿದಾಗ ನಾನು ಕಂಡದ್ದೇನೆಂದರೆ ಅಲ್ಲಾಹನ ಮಾರ್ಗದಲ್ಲಿ ಚಂದ ನೀಡುವಾಗ ನನ್ನ ಗ್ರಾಹಕರ ಸಂಖ್ಯೆ ವರ್ಧಿಸುತ್ತದೆ. ನನ್ನ ಆದಾಯದಲ್ಲಿ ಅಲ್ಲಾಹನ ವಿಶಿಷ್ಟ ಅನುಗ್ರಹವಿರುತ್ತದೆ.

ಈ ಜನರು ಯುರೋಪಿಯನ್ ದೇಶಗಳಲ್ಲಿ ವಾಸಿಸುವವರೂ ಲೌಕಿಕ ಜೀವಿತವನ್ನು ನಡೆಸುವವರೂ ಆಗಿದ್ದರೂ ಅಲ್ಲಾಹನು ಅವರನ್ನು ಅಹ್ಮದಿಯ್ಯತ್ ಕಡೆಗೆ ಕರೆದು ತಂದನು. ಅವರಿಗೆ ತನ್ನ ಅನುಗ್ರಹವನ್ನು ದಯಪಾಲಿಸಿದನು ಮತ್ತು ಅವರ ವಿಶ್ವಾಸದಲ್ಲಿ ದೃಢತೆಯನ್ನು ಸಹ ಉಂಟು ಮಾಡುತ್ತಿದ್ದಾನೆ.

ಭಾರತದಿಂದ ಇನ್ಸ್‌ಪೆಕ್ಟರ್ ಸಲೀಮ್ ಸಾಹಿಬ್ ಬರೆಯುತ್ತಾರೆ: ಜಯಪುರದಲ್ಲಿ ಒಬ್ಬ ಅಹ್ಮದಿ ಒಂದು ಪ್ರೈವೇಟ್ ಸ್ಕೂಲ್‌ನಲ್ಲಿ ಟೀಚರ್ ಆಗಿದ್ದರು. ಕಳೆದ ವರ್ಷ ಅವರೊಂದಿಗೆ ವಕ್‌ಫೇ ಜದೀದ್ ಚಂದ ನೀಡಲು ಹೇಳಲಾಯಿತು. ಅವರ ಆದಾಯ ಪ್ರಕಾರ ಅವರ ವಾಗ್ದಾನ ಐದು ಸಾವಿರ ರೂಪಾಯಿಗಳಾಗುತ್ತವೆ. ನಾನು ಇಷ್ಟು ಹಣ ಹೇಗೆ ಕೊಡಲಿ ಎಂದು ಅವರು ಹೇಳಿದರು. ಅಲ್ಲಾಹನು ಅವರಿಗೆ ಚಂದ ನೀಡುವ ಭಾಗ್ಯ ನೀಡುವನು ಎಂದು ಅವರೊಂದಿಗೆ ಹೇಳಲಾಯಿತು. ಈ ವರ್ಷ ಅವರನ್ನು ಕಾಣಲು ಹೋದಾಗ ಅವರು ಅದೇ ಶಾಲೆಯಲ್ಲಿ ಪ್ರಿನ್ಸಿಪಾಲ್ ಆಗಿದ್ದರು. ಅವರು ಹೇಳಿದರು: ಚಂದ ನೀಡಿದುದರಿಂದ ಅಲ್ಲಾಹನು ಎಷ್ಟು ಅನುಗ್ರಹ ನೀಡಿರುವನೆಂದರೆ ನಾನು ಈ ಶಾಲೆಯನ್ನು ಖರೀದಿಸಿದೆ. ಇನ್ಸ್‌ಪೆಕ್ಟರ್ ಬರೆಯುತ್ತಾರೆ: ಈಗ ಅವರು ನಾಲ್ಕು ಶಾಲೆಗಳನ್ನು ನಡೆಸುತ್ತಿದ್ದಾರೆ. ಮೊದಲು ಅವರ ಮನೆಯ ಛಾವಣಿಗೆ ತಗಡು ಹೊದಿಸಲಾಗಿತ್ತು. ಈಗ ಅವರಿಗೆ ಮೂರು ಮಾಳಿಗೆಗಳ ಮನೆ ಇದೆ. ಅದರ ಒಂದು ಮಾಳಿಗೆ ಜುಮುಅ ನಮಾಝ್‌ಗೆ ಇರಿಸಲಾಗಿದೆ. ಇದು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದುದರ ಅನುಗ್ರಹವಾಗಿದೆ. ಆ ಕಾರಣದಿಂದ ಅವರ ಈಮಾನ್ ವರ್ಧಿಸುತ್ತಿದೆ.

ಕೆನಡದ ಸದರ್ ಲಜ್‌ನ ಇಮಾಇಲ್ಲಾಹ್ ಹೇಳುತ್ತಾರೆ: ಒಂದು ಲಜ್‌ನ ಮಜ್ಲಿಸನ್ನು ಸಂದರ್ಶಿಸಿದಾಗ ಅಲ್ಲಿನ ಒಬ್ಬ ಮಹಿಳೆ ಹೇಳಿದರು: ಅವರ ಹನ್ನೆರಡು ವರ್ಷ ಪ್ರಾಯದ ಮಗಳಿಗೆ ಶಾಲೆಯಿಂದ ಎಂಬತ್ತು ಡಾಲರ್ ಪಾರಿತೋಷಿಕ ಲಭಿಸಿತು. ಆ ಹಣದಿಂದ ಆ ಬಾಲಿಕೆ ಏನಾದರೂ ಖರೀದಿ ಮಾಡಲು ಇಚ್ಛಿಸುತ್ತಿದ್ದಳು. ಆದರೆ ವಕ್‌ಫೇ ಜದೀದ್ ಸೆಕ್ರೆಟರಿಯ ಪ್ರೇರೇಪಣೆ ಪ್ರಕಾರ ಅವಳು ಆ ಹಣವನ್ನು ವಕ್‌ಫೇ ಜದೀದ್ ಚಂದವಾಗಿ ನೀಡಿದಳು. ಆ ಬಾಲಿಕೆಯನ್ನು ಅಲ್ಲಾಹನು ಹೇಗೆ ಅನುಗ್ರಹಿಸಿದನೆಂದರೆ ಮರುದಿನ ಅಬ್ದುಸಲಾಮ್ ಸಾಯನ್ಸ್ ಫೇರ್‌ನಲ್ಲಿ ಅವಳಿಗೆ ಪ್ರಥಮ ಸ್ಥಾನ ದೊರೆತು ಮುನ್ನೂರು ಡಾಲರ್ ಬಹುಮಾನ ಲಭಿಸಿತು. ಈ ರೀತಿ ಅಲ್ಲಾಹನು ಆ ಬಾಲಿಕೆಯ ವಿಶ್ವಾಸದಲ್ಲಿ ಇನ್ನಷ್ಟು ವರ್ಧನೆಯನ್ನುಂಟುಮಾಡಿದನು.

ಈಗ ಒಂದು ಹೊಸ ಗೇಮ್ ಪ್ರಾರಂಭವಾಗಿದೆ. Fortnite ಎಂದು ಅದರ ಹೆಸರು. ಕೆಲವು ಮಕ್ಕಳು ಈ ಗೇಮ್‌ನಲ್ಲಿ ತಮ್ಮ ಹಣ ಕಳೆದುಕೊಳ್ಳುತ್ತಿದ್ದಾರೆ. ತಂದೆ ತಾಯಂದಿರು, ಖುದ್ದಾಮುಲ್ ಅಹ್ಮದಿಯಾ, ಅತ್‌ಫಾಲುಲ್ ಅಹ್ಮದಿಯಾ ಮಕ್ಕಳನ್ನು ಇದರಿಂದ ತಡೆಯಬೇಕು. ಒಂದು ಗೇಮ್ ನಂತರ ಇನ್ನೊಂದು ಸ್ಟೆಪ್‌ಗೋಸ್ಕರ ಹೊಸ ಕಾರ್ಡು ಖರೀದಿಸುತ್ತಾರೆ. ಈ ಗೇಮ್‌ಗೆ ನಶೆ ಪದಾರ್ಥದ ಹಾಗೆ ಮಕ್ಕಳಿಗೆ ಚಟವಾಗುತ್ತದೆ. ಅವರ ಸಮಯ ಹಾಳಾಗುತ್ತದೆ ಮಾತ್ರವಲ್ಲ ತಪ್ಪು ಯೋಚನೆಗಳು ಸಹ ಹುಟ್ಟುತ್ತವೆ. ಕೆಲವು ತಂದೆ ತಾಯಂದಿರಿಗೆ ಸಹ ನಷ್ಟ ಉಂಟಾಗಿದೆ. ಇದರಿಂದ ದೂರ ಉಳಿಯಬೇಕಾಗಿದೆ. ಅಲ್ಲಾಹನ ಮಾರ್ಗದಲ್ಲಿ ಹಣ ಖರ್ಚು ಮಾಡುವ ಕುರಿತು ಅಲ್ಲಾಹನು ನೀಡಿದ ಮಾರ್ಗದರ್ಶನದ ಕಡೆಗೆ, ವಿಶಿಷ್ಟವಾಗಿ ವಕ್ಫ್ ಜದೀದ್ ಚಂದ ನೀಡುವ ಕುರಿತು ಮಕ್ಕಳಲ್ಲಿ ಅಭಿರುಚಿ ಹುಟ್ಟಿಸಬೇಕು.

ಕರ್ನಾಟಕದ ವಕ್‌ಫೇ ಜದೀದ್ ಇನ್ಸ್‌ಪೆಕ್ಟರ್ ಬರೆಯುತ್ತಾರೆ: ನಾನು ಮತ್ತು ನಾಯಿಬ್ ನಾಝಿಮ್ ಮಾಲ್ ಒಂದು ರೆಫ್ರೆಶರ್ ಕೋರ್‌ಸಿಗೆ ಹೋಗಿದ್ದೆವು. ನಾಯಿಬ್ ನಾಝಿಮ್ ಮಾಲ್, ಲೋಕಲ್ ಮುಅಲ್ಲಿಮರ ಮನೆಯಲ್ಲಿ ಹೇಳಿದರು: ಕೇರಳದಲ್ಲಿ ಈ ವರ್ಷ ಬಹಳ ಹೆಚ್ಚು ಮಳೆ ಸುರಿಯಿತು. ಆದುದರಿಂದ ವಕ್‌ಫೇ ಜದೀದ್ ಚಂದ ವಸೂಲಿ ತಡವಾಗಬಹುದು ಎಂದು ಹೇಳಿದರು. ಅನಂತರ ನಾಯಿಬ್ ನಾಝಿಮ್ ಸಾಹಿಬರು ಮುಅಲ್ಲಿಮರ ಮನೆಯಿಂದ ಹೋಗುವಾಗ ಅವರ ಮಕ್ಕಳಿಗೆ ನೂರು ನೂರು ರೂಪಾಯಿಗಳ ಪಾರಿತೋಷಕ ನೀಡಿದರು. ಸ್ವಲ್ಪ ದಿನಗಳ ನಂತರ ನಾನು ಆ ಜಮಾಅತಿಗೆ ಪುನಃ ಹೋದಾಗ ಮುಅಲ್ಲಿಮರ ಮಕ್ಕಳು

ಅವರಿಗೆ ದೊರೆತ ನೂರು ರೂಪಾಯಿಗಳ ನೋಟುಗಳನ್ನು ವಕ್‌ಫೇ ಜದೀದ್ ಚಂದವಾಗಿ ನೀಡಿ ಹೇಳಿದರು, ಕೇರಳದ ಸ್ಥಿತಿ ಜಲಪ್ರಳಯದಿಂದ ಕೆಟ್ಟು ಹೋಗಿರುವ ಕಾರಣ ನಮ್ಮ ಪರವಾಗಿ ಈ ಹಣ ಚಂದವಾಗಿ ಸ್ವೀಕರಿಸಿರಿ. ಆ ಚಿಕ್ಕ ವಯಸ್ಸಿನ ಆ ಮಕ್ಕಳಿಗೆ ಚಂದದ ಮಹತ್ವ ಬಹಳ ಹೆಚ್ಚಾಗಿ ತಿಳಿದಿತ್ತು.

ಆಸ್ಟ್ರೇಲಿಯಾ ಜಮಾಅತಿನ ಸದರ್ ಹೇಳುತ್ತಾರೆ: ಒಬ್ಬರು ತಮ್ಮ ಈ ವರ್ಷದ ಚಂದ ವಕ್‌ಫೇ ಜದೀದ್ ಪಾವತಿ ಮಾಡಿದ್ದರು. ಅವರೊಂದಿಗೆ ಹಿಂದಿನ ಬಾಕಿ ಚಂದ ಪಾವತಿಸಲು ವಿಶೇಷವಾಗಿ ಕೋರಲಾಯಿತು. ಆಗ ಅವರು ಒಂದು ದೊಡ್ಡ ಸಂಖ್ಯೆಯ ಹಣ ಪಾವತಿಸಿದರು. ಮರುದಿನ ಸಂಜೆ ಅವರ ಫೋನ್ ಬಂತು. ನಾನು ಮೂರು ವರ್ಷದಿಂದ ಒಂದು **ಫುಡ್ ಟೇಕ್ ಎವೇ** (food take away) ಚಲಾಯಿಸುತ್ತಿದ್ದೇನೆ. ಈ ವರ್ಷ ಚಂದ ನೀಡಿದ ನಂತರ ಈ ದಿನ ಎಷ್ಟು ಗ್ರಾಹಕರು ಆಗಮಿಸಿದರೋ ಅಷ್ಟು ಜನ ಕಳೆದ ಮೂರು ವರ್ಷಗಳಲ್ಲಿ ಯಾವ ದಿನವೂ ಆಗಮಿಸಿರಲಿಲ್ಲ.

ಕೆಲವು ಅಂಕಿ ಅಂಶಗಳನ್ನು ನೀಡುತ್ತಿದ್ದೇನೆ. ಅಲ್ಲಾಹನ ಅನುಗ್ರಹದಿಂದ ವಕ್‌ಫೇ ಜದೀದಿನ 61ನೇ ವರ್ಷ ಡಿಸೆಂಬರ್ 31 2018ರಂದು ಮುಕ್ತಾಯವಾಯಿತು. ಈ ವರ್ಷ 91ಲಕ್ಷ ಮೂವತ್ತನಾಲ್ಕು ಸಾವಿರ ಪೌಂಡ್ ಅಹ್ಮದಿಯಾ ಜಮಾಅತ್ ಬಲಿದಾನವಾಗಿ ನೀಡಿತು. ಇದು ಕಳೆದ ವರ್ಷಕ್ಕಿಂತ ಎರಡು ಲಕ್ಷ ಎಪ್ಪತ್ತೊಂದು ಸಾವಿರ ಪೌಂಡ್‌ಗಳಷ್ಟು ಹೆಚ್ಚಿಗೆ ಇದೆ. ಪಾಕಿಸ್ಥಾನ ತನ್ನ ಸ್ಥಾನವನ್ನು ಯಥಾರೀತಿ ಉಳಿಸಿಕೊಂಡಿದೆ. ಅನಂತರದ ಪ್ರಥಮ ಹತ್ತು ಸ್ಥಾನಗಳನ್ನು ಹೊಂದಿದ ದೇಶಗಳು ಅನುಕ್ರಮವಾಗಿ ಬ್ರಿಟನ್, ಜರ್ಮನಿ, ಅಮೇರಿಕ, ಕೆನಡ, ಭಾರತ, ಆಸ್ಟ್ರೇಲಿಯಾ, ಇಂಡೋನೇಶಿಯಾ, ಮಧ್ಯಪೂರ್ವದ ಒಂದು ದೇಶ, ಘಾನ, ಮಧ್ಯಪೂರ್ವದ ಇನ್ನೊಂದು ದೇಶ ಆಗಿದೆ. ಈ ವರ್ಷ ಹದಿನೇಳು ಲಕ್ಷ ಮೂವತ್ತೆರಡು ಸಾವಿರ ಜನರು ವಕ್‌ಫೇ ಜದೀದ್‌ನಲ್ಲಿ ಸೇರಿದರು. ಈ ವರ್ಷ ಹೊಸದಾಗಿ ಸೇರಿದವರ ಸಂಖ್ಯೆ ಒಂದು ಲಕ್ಷ ಇಪ್ಪತ್ತಮೂರು ಸಾವಿರವಾಗಿದೆ.

ಭಾರತದಲ್ಲಿ ಪ್ರಥಮ ಸ್ಥಾನದಲ್ಲಿ ಚಂದ ವಸೂಲಾದ 10 ಪ್ರಾಂತ್ಯಗಳು ಅನುಕ್ರಮವಾಗಿ ಕೇರಳ, ಜಮ್ಮುಕಾಶ್ಮೀರ, ಕರ್ನಾಟಕ, ತೆಲಂಗಾಣ, ತಮಿಳುನಾಡು, ಒಡಿಶ, ಪಶ್ಚಿಮ ಬಂಗಾಳ, ಪಂಜಾಬ್, ದೆಹಲಿ, ಉತ್ತರಪ್ರದೇಶ. ಚಂದ ವಸೂಲಿಗೆ ಸಂಬಂಧಿಸಿ ಪ್ರಥಮ ಸ್ಥಾನದಲ್ಲಿರುವ ಹತ್ತು ಜಮಾಅತ್‌ಗಳು ಅನುಕ್ರಮವಾಗಿ, ಹೈದರಾಬಾದ್, ಖಾದಿಯಾನ್, ಪತ್ತಪಿರಿಯಂ, ಕೋಯಿಕ್ಕೋಡ್, ಕೊಲ್ಕತ್ತ, ಬೆಂಗಳೂರು, ಚೆನ್ನೈ, ಕರುಳಾಯಿ, ಖುಷಿನಗರ್, ದೆಹಲಿ.

ಅಲ್ಲಾಹನು ವಕ್‌ಫೇ ಜದೀದ್ ಚಂದದಲ್ಲಿ ಭಾಗವಹಿಸುವ ಎಲ್ಲಾ ದೇಶಗಳ ಜನರಿಗೆ ಸಂಪತ್ತಿನಲ್ಲಿಯೂ ಸಂತಾನದಲ್ಲಿಯೂ ಅನುಗ್ರಹ ನೀಡಲಿ. ಅವರು ಮುಂದೆ ಸಹ ಉನ್ನತ ಮಟ್ಟದ ಬಲಿದಾನಗಳನ್ನು ನೀಡುವ ಭಾಗ್ಯ ಅವರಿಗೆ ಕರುಣಿಸಲಿ – ಆಮೀನ್.

———————*****———————


***Friday Sermon delivered by Hadrath Khaleefatul Masih Al Khamis*** *(atba)*

*At,Masjid Baithul Futhuh London, UK. On 04-01-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon